


# ಗಾಂಧೀ ಗುಡಿ ಎಂಬ ಚರಿತ್ರೆ

ಗಾಂಧೀಜಿ ಅಧ್ಯಕ್ಷತೆ ವಹಿಸಿದ್ದ ಏಕೈಕ ಸಮಾವೇಶ ಎನ್ನುವ ಹೆಗ್ಗಳಿಕೆಯ 'ಬೆಳಗಾವಿ ಕಾಂಗ್ರೆಸ್ ಅಧಿವೇಶನ'ದ ಶತಮಾನೋತ್ಸವ ಈಚೆಗಷ್ಟೇ ಆಚರಣೆಗೊಂಡಿದೆ. ಇಂಥ ಸಾಂಕೇತಿಕ ಆಚರಣೆಗಳಾಚೆಗೆ ಗಾಂಧಿಯನ್ನು ಸಮಕಾಲೀನಗೊಳಿಸುವುದು ಹೇಗೆ? ಗಂಗಾವಳಿ ನದೀತೀರದ ಬಾಸ್ಗೋಡು ಗ್ರಾಮದಲ್ಲಿನ 'ಗಾಂಧೀಗುಡಿ' ನೆಪದ ಈ ಬರಹ ಮಹಾತ್ಮನ ನಿರಂತರ ಬಿತ್ತನೆಯ ಅಗತ್ಯವನ್ನು ನೆನಪಿಸುತ್ತಿದೆ.

■ ನಭಾ ಒಕ್ಕುಂದ

ಈ ನದಿ ಪರ್ವತಗಳು, ಗಿಡ–ಮರಗಳು ಮಾತನಾಡುವಂತಿದ್ದರೆ ಅಥವಾ ಅವುಗಳ ಭಾಷೆ ನಮಗೆ ತಿಳಿಯುವಷ್ಟಾದರೂ ನಾವು ಸಂವೇದನಾಶೀಲರಾಗಿದ್ದರೆ, ನಮ್ಮ ಚರಿತ್ರೆಯ ಅರಿವು ಬೇರೆಯೇ ಆಗಿರುತ್ತಿತ್ತೇನೋ.

ದೊಡ್ಡ ಸೇತುವೆಯೊಂದು ಇಬ್ಭಾಗ ಮಾಡಿ ಇಟ್ಟಂತೆ ಕಾಣುತ್ತಿರುವ ಈ ಗಂಗಾವಳಿ. ನನ್ನ ಬಾಲ್ಯದಲ್ಲಿ ಅಲೆಅಲೆಯಾಗಿ ಹರಿಯುತ್ತ ಕಡಲಿನತ್ತ ಧಾವಿಸುತ್ತಿತ್ತು. ಈ ನದೀತೀರದ ಅಜ್ಜಿಯ ಮನೆಗೆ ವರ್ಷಕ್ಕೊಮ್ಮೆಯಾದರೂ ಹೋದಾಗ ಬೆರಗಿನಿಂದ ಆ ಚೆಲುವನ್ನು ನೋಡುತ್ತಿದ್ದೆ. ಈಗ ನಿರ್ಮಾಣವಾಗಿರುವ ಸೇತುವೆ ಅಂಕೋಲಾ ಮತ್ತು ಗೋಕರ್ಣವನ್ನು ಇನ್ನಷ್ಟು ಹತ್ತಿರಾಗಿಸಿ, ಜನರಿಗೆ ಅನುಕೂಲವಾಗಿರಬಹುದು. ಸೇತುವೆಯ ಓಡಾಟದ ಈ ದಿನಗಳಲ್ಲಿ ಹುಟ್ಟಿ, ಅಜ್ಜಿಯ ಮನೆಗೆ ಬರುವ ಮಕ್ಕಳಿಗೆ ಕೆಳಗೆ ದೂರದ ನೀರಿನಲ್ಲಿ ಪುಟ್ಟ ಹಕ್ಕಿ ತೇಲಿದಂತೆ ಕಾಣುತ್ತಿರುವ ಪಾತಿ ದೋಣಿಗಳು ಚಂದ ಕಾಣಬಹುದು. ನದಿಗೆ ಯಾವುದು ಚಂದ? ಹೇಳುವವರು ಯಾರು? ಕಳೆದ ವರ್ಷ ಮಳೆಗಾಲದಲ್ಲಿ ಗುಡ್ಡ ಕುಸಿದು ಅನಾಹುತವಾಗಿ, ಗಂಗಾವಳಿ ನದಿಯ ಹೆಸರು ಎಲ್ಲ ಕಡೆ ಕೇಳಿ ಬಂತು. ಅದರ ಹಿಂದಿನ ವರ್ಷ ಇದೇ ಗಂಗಾವಳಿ ನದಿಗೆ ದೊಡ್ಡ ಮಹಾಪೂರ ಬಂದು ಊರೂರು ಹೊಲ–ಗದ್ದೆಗಳಲ್ಲಿ ಕೆಸರಿನ ಕೊಚ್ಚೆ ತುಂಬಿತ್ತು. ಯಾರಿಗೆ ಗೊತ್ತು? ನದಿಗೆ ಏನೋ ಹೇಳಲಿಕ್ಕಿತ್ತೇನೋ?

ಗಂಗಾವಳಿ ನದಿಯೀಗ ನನಗೆ ಮುಖ್ಯವೆನಿಸಿದ್ದು, ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಅದು ನಿರ್ವಹಿಸಿದ್ದ ಪಾಲುದಾರಿಕೆಯ ಬಗ್ಗೆ ತಿಳಿದು. ಗಂಗಾವಳಿ ನದಿ ದಡದ ಆಚೀಚೆಯ 40 ಹಳ್ಳಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ಸಂಪೂರ್ಣವಾಗಿ ಸಮರ್ಪಿಸಿಕೊಂಡ ಜನರ ತವರು ನೆಲವಾಗಿತ್ತಂತೆ.